# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ: KIADB ಕಚೇರಿಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸುವ ಕುರಿತು.**

**ಉಲ್ಲೇಖ: ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ ಮುಕಾ/ 10058743/2025, ದಿನಾಂಕ 14.05.2025.**

****

**ಪ್ರಸ್ತಾವನೆ:**

ಮೇಲೆ ಓದಲಾದ ಟಿಪ್ಪಣಿಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಕೆ.ಐ.ಎ.ಡಿ.ಬಿ. ವಿಚಾರವಾಗಿ ಭೇಟಿ ಮಾಡಲು ಬರುವ ಸಾರ್ವಜನಿಕರುಗಳು ಹಂಚಿಕೆ ಪತ್ರ, ಗುತ್ತಿಗೆ ಹಕ್ಕುಗಳ ವರ್ಗಾವಣೆ ಪತ್ರ, ಸ್ವಾಧೀನ ಪ್ರಮಾಣ ಪತ್ರ, ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರ, ಶುದ್ಧ ಕ್ರಯ ನೋಂದಣಿಗಾಗಿ ಬಾಕಿಯಿರುವ ಪ್ರಕರಣಗಳು, ಭೂ ಸ್ವಾಧೀನ ಮಾಡಿಕೊಂಡ ನಂತರ ಭೂ ಮಾಲೀಕರಿಗೆ ನೀಡಬೇಕಾಗಿರುವ ಬಾಕಿ ಹಣ ಇತ್ಯಾದಿ ಕುರಿತು ಕೆ.ಐ.ಎ.ಡಿ.ಬಿ. ವತಿಯಿಂದ ವಿಳಂಬವಾಗುತ್ತಿರುವ ಬಗ್ಗೆ ದೂರು ನೀಡುತ್ತಿದ್ದಾರೆ ಎಂದು, ಆದಕಾರಣ, ಕೆ.ಐ.ಎ.ಡಿ.ಬಿ. ಕಚೇರಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿ ಅಲ್ಲಿನ ಕಚೇರಿಯಲ್ಲಿ ಮೇಲ್ಕಂಡ ಪ್ರಕರಣಗಳು ಎಷ್ಟು ಬಾಕಿ ಇದೆ, ವಿಳಂಬಕ್ಕೆ ಕಾರಣ, ಈ ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಗೊಳಿಸಲು ಕೈಗೊಳ್ಳಬೇಕಾಗಿರುವ ಕ್ರಮ, ಈ ಪ್ರಕರಣಗಳನ್ನು ಇತ್ಯರ್ಥಗೊಳಿಸಿದಲ್ಲಿ ಸರ್ಕಾರಕ್ಕೆ ಬರುವ ಆದಾಯ ಎಷ್ಟು? ಎಂಬ ಬಗ್ಗೆ ಮಾಹಿತಿಯನ್ನು ನೀಡಲು ಸೂಚಿಸಿರುತ್ತಾರೆ.

ಅಲ್ಲದೇ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ದಿನಾಂಕ 30.09.2023, 22.05.2024 ಹಾಗೂ 06.09.2024 ರ ಪತ್ರಗಳಲ್ಲಿ ಕೆ.ಐ.ಎ.ಡಿ.ಬಿ. ಕೇಂದ್ರ ಕಚೇರಿ ಹಾಗೂ ವಲಯ ಕಚೇರಿಗಳಲ್ಲಿ E-Office ಅನುಷ್ಠಾನಗೊಳಿಸಿ, ಕಾರ್ಯ ನಿರ್ವಹಿಸಲು ಈಗಾಗಲೇ ಸೂಚಿಸಿದ್ದರೂ, ಈ ಮೇಲ್ಕಂಡ ದೂರುಗಳಿಗೆ ಕಾರಣಗಳೇನೆಂಬುದನ್ನು ಪರಿಶೀಲಿಸಲು ಒಂದು ಪರಿಶೀಲನಾ ತಂಡವನ್ನು ರಚಿಸುವುದು ಅವಶ್ಯಕವಾಗಿದೆ.

ಅದರನ್ವಯ, ಈ ಕೆಳಕಂಡಂತೆ ಆದೇಶಿಸಿದೆ.

## <u>ಸರ್ಕಾರದ ಆದೇಶ ಸಂಖ್ಯೆ ಸಿಐ 276 ಐಎಪಿ 2025</u>

## <u>ಬೆಂಗಳೂರು, ದಿನಾಂಕ: 17.05.2025</u>

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಈ ಕೆಳಕಂಡ ಹಿರಿಯ ಅಧಿಕಾರಿಗಳು ಕೆ.ಐ.ಎ.ಡಿ.ಬಿ. ಕಚೇರಿಗೆ ಖುದ್ದು ಭೇಟಿ ನೀಡಿ, ಮಂಡಳಿಯಲ್ಲಿ ಹಂಚಿಕೆ ಪತ್ರ, ಗುತ್ತಿಗೆ ಹಕ್ಕುಗಳ ವರ್ಗಾವಣೆ ಪತ್ರ, ಸ್ವಾಧೀನ ಪ್ರಮಾಣ ಪತ್ರ, ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರ, ಶುದ್ಧ ಕ್ರಯ ಪತ್ರ, ಕಟ್ಟಡ ನಕ್ಷೆ ಅನುಮೋದನೆ, ಲೆಕ್ಕಪತ್ರ/ಲೆಕ್ಕ ಪರಿಶೋಧನೆಗೆ ಬಾಕಿಯಿರುವ ಪ್ರಕರಣಗಳು ಎಷ್ಟು, ಇವುಗಳ ವಿಳಂಬಕ್ಕೆ ಕಾರಣಗಳನ್ನು ಪರಿಶೀಲಿಸಿ, ಈ ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಗೊಳಿಸಲು ಕೈಗೊಳ್ಳಬೇಕಾಗಿರುವ ಕ್ರಮಗಳ ಕುರಿತು **ಒಂದು ವಾರದೊಳಗಾಗಿ** ಸರ್ಕಾರಕ್ಕೆ ವರದಿ ನೀಡಲು ಆದೇಶಿಸಿದೆ.

| ಕ್ರ. ಸಂ. | ಅಧಿಕಾರಿಗಳ ಹೆಸರು ಮತ್ತು ಹುದ್ದೆ | ಕೆ.ಐ.ಎ.ಡಿ.ಬಿ. ಯಲ್ಲಿ ತಪಾಸಣೆ ಮಾಡಬೇಕಾಗಿರುವ ವಿಭಾಗಗಳು |
|---|---|---|
| 1 | ಶ್ರೀ. ಎಸ್.ಆರ್. ಸತೀಶ,<br>ಅಪರ ನಿರ್ದೇಶಕರು (ಆಡಳಿತ),<br>ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ | ಕಾರ್ಯದರ್ಶಿ-2 ವಿಭಾಗ |
| 2 | ಶ್ರೀ. ಕೆ.ಎಂ. ಜಗದೀಶ,<br>Chief Operating Officer,<br>Invest Karnataka Forum | ಕಾರ್ಯದರ್ಶಿ-1 ವಿಭಾಗ |
| 3 | ಶ್ರೀ. ವಿ.ಎಸ್. ಹೊನ್ನಮನೆ<br>ಅಪರ ನಿರ್ದೇಶಕರು, ಜಿ.ಕೈ.ಕೇಂ.,<br>ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ | ಜಂಟಿ ನಿರ್ದೇಶಕರು-ವಿಭಾಗ |
| 4 | ಶ್ರೀ. ಹೆಚ್.ಆರ್. ಅರುಣ್ ಕುಮಾರ್,<br>ಅಪರ ನಿರ್ದೇಶಕರು (MSME),<br>ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ | ಜಂಟಿ ನಿರ್ದೇಶಕರು-Town Planning Section |
| 5 | ಶ್ರೀ. ಬಿ.ಕೆ. ಶಿವಕುಮಾರ್,<br>ವ್ಯವಸ್ಥಾಪಕ ನಿರ್ದೇಶಕರು,<br>VTPC, ಬೆಂಗಳೂರು | Accounts & Audit Section |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/3/25

**(ಸಿ.ವಿ. ಹರಿದಾಸನ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಕೈ.ಅ.)

**ಇವರಿಗೆ,**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ಬೆಂಗಳೂರು.
3. ಸಂಬಂಧಿಸಿದ ಅಧಿಕಾರಿಗಳು.
4. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.